Strike by the Employees of the Shimoga District Co-operative Bank.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ನಾನು ಈಗಾಗಲೇ ೪ ದಿವಸಗಳ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಶಿವಮೊಗ್ಗ ಜಿಲ್ಲಾ ಸಹಕಾರಿ ಬ್ಯಾಂಕ್ ಏನಿದೆ ಅಲ್ಲಿ ನೌಕರರ ಒಳಜಗಳದಿಂದಾಗಿ ಸ್ಟೈಕ್ ನಡೆದಿದೆ. ಬ್ಯಾಂಕಿನ ಕೆಲಸಕಾರ್ಯಗಳು ನಿಂತುಹೋಗಿದೆ. ಅಲ್ಲಿಯ ನೌಕರರಲ್ಲಿ ೨ ಗುಂಪುಗಳಾಗಿದೆ. ಆವರಲ್ಲಿ ಯಾರು ಮುಂದೆ ಪ್ರೆಸಿಡೆಂಟ್ ಆಗಬೇಕು ಎನ್ನುವ ಬಗ್ಗೆ ಅವರವರಲ್ಲಿ ಪೈಪೋಟಿ ಬಿದ್ದಿದೆ. ಆ ವಿಷಯಕ್ಕೆ ನಾನು ಈಗ ಹೋಗುವುದಿಲ್ಲ. ಅಲ್ಲಿ ಯಾರೇ ಅಧ್ಯಕ್ಷರಾಗಲೀ ಆಥವಾ ಬಿಡಲೀ; ಅಲ್ಲಿ ಏನಾಗಿದೆ ಎಂದರೆ ಅಲ್ಲಿ ಕೆಲವರು ಕೋರ್ಟಿಗೆ ಹೋಗಿರುವುದರಿಂದ ಜಿಲ್ಲಾ ಸಹಕಾರಿ ಬ್ಯಾಂಕಿನ ಕೆಲಸಗಳು ಸಂಪೂರ್ಣವಾಗಿ ನಿಂತುಬಿಟ್ಟಿದೆ. ರೈತರಿಗೆ ಸಕಾಲಕ್ಕೆ ಸಾಲ ವಗೈರೆ ದೊರೆಯದಂತಾಗಿದೆ. ರೈತರಿಗೆ ಸಾಲ ಮತ್ತು ರಾಸಾಯನಿಕ ಗೊಬ್ಬರಗಳು ಈಗ ಸಿಕ್ಕದೇಹೋದರೆ ಅವರು ಸಾಲವನ್ನು ಪಾಪಸ್ಸು ಕೊಡುವುದಕ್ಕೆ ಆಗುವುದಿಲ್ಲ. ಈ ವಿಚಾರವನ್ನು ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಆದರ ಬಗ್ಗೆ ವಿಚಾರ ಮಾಡಿಸಿ, ವಿಷಯ ತಿಳಿಸುತ್ತೇನೆಂದು ಅವರು ಹೇಳಿದ್ದರು. ಇದರ ಬಗ್ಗೆ ಅವರು ವಿಚಾರ ಮಾಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಇವತ್ತು ಅಲ್ಲಿ ಒಳಜಗಳಗಳು ಏನೇ ಇರಲಿ ರೈತರಿಗೆ ತೊಂದರೆಯಾಗದಂತೆ ಅವರಿಗೆ ಗೊಬ್ಬರ ಮತ್ತು ಸಾಲ ಸಿಕ್ಕುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಿದ್ದಾರೆಯೇ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಆರ್. ಗುಂಡೂರಾವ್.—ತಾವು ಹೇಳಿದಮೇಲೆ ನಾನು ಅಲ್ಲಿಯ ಅಧಿಕಾರಿಗಳನ್ನು ಕರೆಸಿ ಮಾತನಾಡಿದಂಥ ಕಾಲದಲ್ಲಿ ರೈತರಿಗೆ ಸಾಲ ಮತ್ತು ಗೊಬ್ಬರ ಸಿಕ್ಕುವುದಕ್ಕೆ ತೊಂದರೆ ಯಾಗದಂಥ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ; ಬ್ಯಾಂಕಿನ ಕೆಲವು ನೌಕರರು ಕೋರ್ಟಿಗೆ ಹೋಗಿದ್ದಾರೆ, ಈ ವಿಚಾರದಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ನಿನ್ನೆ ದಿವಸ ಎಲ್ಲರನ್ನು ಕರೆದು ನಾನು ಮಾತನಾಡಿದ್ದೇವೆ, ಇವತ್ತು ಆಥವಾ ನಾಳೆ ಒಳಗಾಗಿ ಒಂದು ವರದಿಯನ್ನು ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಆ ವರದಿ ಬಂದಮೇಲೆ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ;

MR. SPEAKER.—The Business Advisory committee is meeting today. We can discuss this matter.

ಶ್ರೀ ಎ. ಜಿ. ಕೊಡಗಿ.—ಒಂದು ವಿಚಾರವನ್ನು ಸರ್ಕಾರದವರು ಗಮನಕ್ಕೆ ತರುವುದಕ್ಕೆ ನಾನು ಇಚ್ಚಿಸುತ್ತೇನೆ. ಇಡೀ ರಾಜ್ಯದಲ್ಲಿರತಕ್ಕಂಥ ಭೂ ಅಭಿವೃದ್ಧಿ ಬ್ಯಾಂಕಿನ ನೌಕರರು ಸ್ಟೈಕ್ ಮಾಡುತ್ತಿದ್ದಾರೆ. ಇದರ ಪರಿಣಾಮ ಏನಾಗಿದೆ ಎಂದರೆ ಶ್ರೀಮಾನ್ ಜೆ. ಹೆಚ್. ಪಟೇಲ್‌ರವರು ಹೇಳಿದ ರೀತಿಯಲ್ಲಿ ಆಗಿದೆ. ರೈತರಿಗೆ ಅಲ್ಲಿ ತೊಂದರೆಯಾಗಿದೆ. ಈ ವಿಚಾರವನ್ನು ಸಹಾನುಭೂತಿಯಿಂದ ನೋಡಿ ಈ ಮುಷ್ಕರವನ್ನು ನಿಲ್ಲಿಸುವುದಕ್ಕೆ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ರಿಕ್ವೆಸ್ಟ್ ಇದೆ ೫ ಗಂಟೆ ಮೇಲೆ ನಾನು ಈ ಪ್ರಶ್ನೆಯನ್ನು ಎತ್ತುತ್ತಿದ್ದೇನೆ. ಈಗ ಏನೇ ಸ್ಟಾಂಡರ್ಡ್‌ಗೆ ವಿದ್ಯಾರ್ಥಿಗಳಿಗೆ ಆಡ್ಮಿಷನ್ ಕೊಡುವ ಬಗ್ಗೆ ಒಂದು ಸಮಸ್ಯೆ ಬಂದಿದೆ. ಇಡೀ ರಾಜ್ಯದ ತುಂಬಾ ಇರುವ ಶಾಲೆಗಳಲ್ಲಿ ಸರಿಯಾಗಿ ಕ್ಲಾಸ್ ರೂಮ್ಸ್ ಇಲ್ಲವಾಗಿದೆ. Therefore, I request the Chair to take up this matter when the Minister for Education is present in the House.

MR. SPEAKER.—We will take it up afterwards.

General Discusssion on Budget (Continued)

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್(ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಉಪನಾಯಕರಂ ಮಾತನಾಡುವಾಗ ಈ ಶೈಕ್ಷವಾಸ್ಥೆಯಲ್ಲಿರತಕ್ಕಂಥ ಸರ್ಕಾರದ ಮೇಲೆ ಅನೇಕ ಗಂರುತರವಾದ ಆಪಾದನೆಗಳನ್ನು ಮಾಡಿದ್ದಾರೆ. ಅದಕ್ಕೆ ನಾನು 'ಬಸವ ಪುರಾಣ' ಎಂದು ಕರೆಯು